ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:509/2025
ಸಿ.ಡಬ್ಲ್ಯು 18 ಪಿ.ಡಬ್ಯೂ :5

| | |
|---|---|
| ಸಾಕ್ಷಿದಾರರ ಹೆಸರು | ಗಿರೀಶ್ ಯು ಆರ್ |
| ತಂದೆಯ ಹೆಸರು | ರಾಮ |
| ವಯಸ್ಸು | 51 ವರ್ಷ |
| ಉದ್ಯೋಗ | ಎ. ಎಸ್ ಐ |
| ವಾಸಸ್ಥಳ | ಪಡುಬಿದ್ರಿ ಪೊಲೀಸ್ ಠಾಣೆ |

ದಿನಾಂಕಃ 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

2024 ರ ಜುಲೈ ತಿಂಗಳಿನಿಂದ ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಎ. ಎಸ್. ಆಗಿ ಕೆಲಸ ನಿರ್ವಹಿಸುತ್ತಾ ಇದ್ದೇನೆ. ದಿಃ 20-12-2024 ರಂದು ಚಾಸಾ 19 ರವರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಬಡಾ ಗ್ರಾಮದ ಉಚ್ಚಿಲದ ಮಹಾಲಿಂಗೇಶ್ವರ ದೇವಸ್ಥಾನದ ಬಳಿ ಸಂಜೆ 5.15 ರಿಂದ 6.00 ಗಂಟೆಯವರೆಗೆ ಮಾಡಿದ ಪಂಚನಾಮೆಯ ಕಾರ್ಯವನ್ನು ಲ್ಯಾಪ್‌ಟಾಪ್ ನಲ್ಲಿ ಬೆರಳಚ್ಚು ಮಾಡಿರುತ್ತೇನೆ. ಅದೇ ವೇಳೆ ಕಚ್ಚಾ ನಕ್ಷೆಯನ್ನು ಚಾಸಾ 19 ರವರ ನಿರ್ದೇಶನದಂತೆ ತಯಾರಿಸಿರುತ್ತೇನೆ. ಪಂಚನಾಮೆ ಹಾಗೂ ನಕ್ಷೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯವರು ಪಂಚನಾಮೆ ಹಾಗೂ ನಕ್ಷೆಯನ್ನು, ಮತ್ತು ಅವುಗಳಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯವರ ಸಹಿಯನ್ನು ನಿಪಿ. 2 ಡಿ ಎಂದು ಗುರುತಿಸಲಾಯಿತು. ನಕ್ಷೆಯನ್ನು ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದ್ದು , ಸಾಕ್ಷಿಯವರ ಸಹಿಯನ್ನು ನಿಪಿ. 3 ಡಿ ಎಂದು ಗುರುತಿಸಲಾಯಿತು.

ಅದೇ ದಿನ ಪಡುಬಿದ್ರಿಯ ನಡ್ಸಾಲು ಗ್ರಾಮದ ಪುಟಾರ್ಡೋ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿ ನಿಲ್ಲಿಸಿದ್ದ ಬಸ್ಸನ್ನು ಚಾಸಾ 19 ರವರು ಪಂಚನಾಮೆಯನ್ನು ಮಾಡಿ ದಸ್ತಗಿರಿ ಮಾಡಿಕೊಂಡಿರುವುದನ್ನು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿರುತ್ತೇನೆ. ನಂತರ ಠಾಣೆಗೆ ಹೋಗಿ ಪ್ರಿಂಟ್ ತೆಗದಿರುತ್ತೇನೆ. ಸಾಕ್ಷಿಯವರು ಸ್ವತ್ತು ಸ್ವಾದೀನ ಪಂಚನಾಮೆಯನ್ನು ಮತ್ತು ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಸ್ವತ್ತು ಅಮಾನತು ಪಂಚನಾಮೆಯನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದ್ದು, ಸಾಕ್ಷಿಯವರ ಸಹಿಯನ್ನು ನಿಪಿ. 5 ಡಿ ಎಂದು ಗುರುತಿಸಲಾಯಿತು.

ಸಾಕ್ಷಿಯವರು ಎರಡು ಭಾವಚಿತ್ರಗಳನ್ನು ನೋಡಿ ಇವುಗಳಲ್ಲಿ ಕಾಣುವ ಬಸ್ಸನ್ನೇ ಅಮಾನತು ಪಡಿಸಿಕೊಂಡದ್ದು ಎಂದು ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ಈಗಾಗಲೇ ನಿಪಿ. 6 ಮತ್ತು 7 ಎಂದು ಗುರುತಿಸಲಾಗಿದೆ. ನಿಪಿ 2 , 3, 5 ನ್ನು ತಯಾರಿಸುವ ವೇಳೆ ಚಾಸಾ 17 ರವರು ನನ್ನ ಮೊಬೈಲಿನಿಂದ ಚಿತ್ರೀಕರಣವನ್ನು ಮಾಡಿರುತ್ತಾರೆ . ಈ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 63 ರೀತಿಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಪ್ರಮಾಣ ಪತ್ರ ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿಯವರು ನೋಡಿ ಗುರುತಿಸಿದ್ದು ಪ್ರಮಾಣ ಪತ್ರವನ್ನು ನಿಪಿ 8 ಎಂದು ಸಾಕ್ಷಿಯವರ ಸಹಿಯನ್ನು ನಿಪಿ. 8 ಎ ಎಂದು ಗುರುತಿಸಲಾಯಿತು.ಸಿ

**ಪಾಟೀ ಸವಾಲುಃ ಆರೋಪಿಯವರ ಪರ ಶ್ರೀ ಪಿ. ಎನ್ ಎಸ. ವಕೀಲರಿಂದಃ**

ಈ ಪ್ರಕರಣದಲ್ಲಿ ಸ್ಥಳ ಪಂಚನಾಮೆ, ನಕ್ಷೆ, ಸ್ವತ್ತು ಸ್ವಾದೀನ ಪಂಚನಾಮೆಯನ್ನು ಬೆರಳಚ್ಚು ಮಾಡಿ ಪ್ರಿಂಟ್ ಹಾಕಿ ಕೊಟ್ಟಿರುವುದನ್ನು



ಹೊರತು ಪಡಿಸಿ ಬೇರೆ ಏನು ಕೆಲಸವನ್ನು ಮಾಡಿರುವುದಿಲ್ಲ ಎಂದರೆ ಹೌದು. ಬೆರಳಚ್ಚು ಮಾಡಲು ಮಾಹಿತಿಯನ್ನು ಯಾರು ನೀಡಿದರು ಎಂದರೆ ಚಾಸಾ 19 ರವರ ಆದೇಶದ ಮೇರೆಗೆ ಮಾಡಿರುತ್ತೇನೆ. ನಿಮ್ಮ ಪ್ರಕಾರ ಬೆರಳಚ್ಚು ಮಾಡಿರುವುದು ಸ್ಥಳದಲ್ಲಿ ಎಂದರೆ ಹೌದು. ಸ್ಥಳದಲ್ಲಿ ಸಾಕ್ಷಿದಾರರ ಸಹಿಯನ್ನು ಪಡೆಯಲಾಗಿದೆಯಾ ಎಂದರೆ ಇಲ್ಲ. ಪ್ರಿಂಟನ್ನು ಪಡುಬಿದ್ರಿ ಪೊಲೀಸ್ ಠಾಣೆ ಯಲ್ಲಿ ತೆಗೆದಿರುವುದು ಎಂದರೆ ಹೌದು.

**ಮರು ವಿಚಾರಣೆಃ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.